# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಬೆಂಗಳೂರು ಕೇಂದ್ರೀಯ ವಿಭಾಗ : ಬೆಂಗಳೂರು

ಕ್ರಸಂ: ಕರಾಸಾ/ಬೆಂ.ಕೇ.ವಿ/ಸಂ/ವಾಣಿಜ್ಯ/1881/2018-19 ದಿನಾಂಕ: 17-11-2018

## " ಇ-ಟೆಂಡರ್ ಪ್ರಕಟಣೆ ಸಂಖ್ಯೆ: 23/2018 "

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗದ ವ್ಯಾಪ್ತಿಯಲ್ಲಿರುವ ನೆಲಮಂಗಲ ವಾಹನ ನಿಲ್ದಾಣದ ವಾಣಿಜ್ಯ ಸಂಕೀರ್ಣದಲ್ಲಿ ಖಾಲಿಇರುವ/ಖಾಲಿಯಾಗಲಿರುವ ಮಳಿಗೆ ಸಂಖ್ಯೆ-1 ,2, 4 ಮತ್ತು 7 ಗಳನ್ನು ಸಾಮಾನ್ಯ ವರ್ಗಕ್ಕೆ ಮೀಸಲಿರಿಸಿ ಅವುಗಳಲ್ಲಿ ಜನರಲ್ ಸ್ಟೋರ್ ವ್ಯಾಪಾರ ಮಾಡಲು ಹಾಗೂ ನೆಲಮಂಗಲ ಘಟಕದ ಆವರಣದಲ್ಲಿ ರಾಷ್ಟ್ರೀಯ ಹೆದ್ದಾರಿ-4 ರ ಕಡೆಗೆ ನಕ್ಷೆಯಲ್ಲಿ ತೋರಿಸಿರುವಂತೆ ಮೂರು ಸ್ಥಳಗಳಲ್ಲಿ ಹೋರ್ಡಿಂಗ್ಸ್‌ಗಳನ್ನು ಪ್ರದರ್ಶಿಸಲು **ಐದು ವರ್ಷಗಳ** ಅವಧಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ದಿನಾಂಕ: 11-12-2018 ರಂದು ಇ-ಟೆಂಡರ್ ನಿಗದಿಪಡಿಸಲಾಗಿದೆ. ಇ-ಟೆಂಡರ್ ಅರ್ಜಿಗಳನ್ನು / ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.eproc.Karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ-ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ಅರ್ಜಿ ಶುಲ್ಕವನ್ನು ಮತ್ತು ಇ.ಎಂ.ಡಿ ಮೊತ್ತವನ್ನು Divisional Controller, KSRTC, Bengaluru Central Division, Bengaluru **ರವರ ಹೆಸರಿನಲ್ಲಿ ಡಿಡಿಯನ್ನು ಪಡೆದು, ಮೂಲ ಡಿಡಿಗಳನ್ನು ಹಾಗೂ ವಿಳಾಸದ ಬಗ್ಗೆ ಮೂಲ ದಾಖಲಾತಿಗಳನ್ನು ಟೆಂಡರ್ ತೆರೆಯುವ ಕೊನೆಯ ದಿನಾಂಕದೊಳಗೆ ಖುದ್ದಾಗಿ ಹಾಜರುಪಡಿಸುವುದು.** ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ ಮೊತ್ತದ ಡಿಡಿ ಪ್ರತಿಗಳನ್ನು, ವಿಳಾಸದ ಮಾಹಿತಿ ಬಗ್ಗೆ ಹಾಗೂ ಸಂಬಂಧಪಟ್ಟ ದಾಖಲಾತಿಗಳ ಪ್ರತಿಗಳನ್ನು ಇ-ಪೋರ್ಟಲ್‌ನಲ್ಲಿ ದಿನಾಂಕ: 08-12-2018 ರಂದು 12:00 ಗಂಟೆಯವರೆಗೆ ಅಪ್‌ಲೋಡ್ ಮಾಡಬಹುದು. ದಿನಾಂಕ: 11-12--2018 ರಂದು (ಯಾವುದೇ ತಾಂತ್ರಿಕ ದೋಷ ಇಲ್ಲದಿದ್ದಲ್ಲಿ) ಇ-ಟೆಂಡರ್‌ನ್ನು ತೆರೆಯಲಾಗುವುದು. ಭಾಗವಹಿಸಿರುವವರು ಇ-ಟೆಂಡರ್ ತೆರೆಯುವ ಸಮಯದಲ್ಲಿ ಹಾಜರಿರುವುದು. **ಮಳಿಗೆಗಳ ವಿವರಗಳು ಈ ಕೆಳಕಂಡಂತಿವೆ.**

| ಕ್ರಸಂ | ಮಳಿಗೆಗಳ ವಿವರ (ವಾಣಿಜ್ಯ ಸಂಕೀರ್ಣ) | ವಿಸ್ತೀರ್ಣ (ಚ.ಅಡಿಗಳು) | ಮಾಸಿಕ ಶುಲ್ಕ | ಇ.ಎಂ.ಡಿ(ರೂ) ಸಂಸ್ಥೆಗೆ | ಇ.ಎಂ.ಡಿ(ರೂ) ಇ-ಪ್ರೊ. ಮೆಂಟ್‌ಗೆ | ಅರ್ಜಿ ಶುಲ್ಕ / ಜಿಎಸ್‌ಟಿ | ಖಾಲಿಯಾಗುವ ದಿನಾಂಕ | ಮೀಸಲಾತಿ |
|---|---|---|---|---|---|---|---|---|
| 1 | ಮಳಿಗೆ ಸಂಖ್ಯೆ-1 | 118 | 20497-00 | 61491-00 | 500-00 | 205+37 | ಖಾಲಿ ಇದೆ | ಸಾಮಾನ್ಯ ವರ್ಗ |
| 2 | ಮಳಿಗೆ ಸಂಖ್ಯೆ-2 | 118 | 27225-00 | 81675-00 | 500-00 | 272+49 | 01-01-2019 | ಸಾಮಾನ್ಯ ವರ್ಗ |
| 3 | ಮಳಿಗೆ ಸಂಖ್ಯೆ-4 | 118 | 29262-00 | 87786-00 | 500-00 | 293+53 | 01-01-2019 | ಸಾಮಾನ್ಯ ವರ್ಗ |
| 4 | ಮಳಿಗೆ ಸಂಖ್ಯೆ-7 | 118 | 29645-00 | 88935-00 | 500-00 | 297+54 | 01-01-2019 | ಸಾಮಾನ್ಯ ವರ್ಗ |

ಪ್ಯಾಕೇಜ್ ನಂ-1 ನೆಲಮಂಗಲ ಘಟಕದ (ಅರಿಶಿನಕುಂಟೆ) ರಾಷ್ಟ್ರೀಯ ಹೆದ್ದಾರಿ-4 ರ ಕಡೆಗೆ ನಕ್ಷೆಯಲ್ಲಿ ತೋರಿಸಿರುವಂತೆ ತೆರೆದ ಸ್ಥಳದಲ್ಲಿ ಹೋರ್ಡಿಂಗ್ಸ್ ಮುಖಾಂತರ ಜಾಹೀರಾತು ಅಳವಡಿಸಲು ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ. | ಸ್ಥಳದ ವಿವರ | ಅಳತೆ (ಚದರ ಅಡಿಗಳಲ್ಲಿ) | ಹೋರ್ಡಿಂಗ್ಸ್‌ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ದರ ಪ್ರತಿ ಚ.ಅಡಿಗೆ | ಮಿತವ್ಯಯ ಮಾಸಿಕ ಪರವಾನಿಗೆ ಶುಲ್ಕ | ಇ.ಎಂ.ಡಿ ಮೊತ್ತ | | ಅರ್ಜಿ ಶುಲ್ಕ + ಜಿಎಸ್‌ಟಿ |
|---|---|---|---|---|---|---|---|---|---|
| | | | | | | | ಸಂಸ್ಥೆಗೆ | ಇ-ವೇದಿಕೆಗೆ | |
| 1 | ನೆಲಮಂಗಲ ಘಟಕ | 20x10 | 01 | 200 | 20-00 | 4000-00 | 12000-00 | 500-00 | 120+22 |
| 2 | ನೆಲಮಂಗಲ ಘಟಕ | 30x30 | 01 | 900 | 20-00 | 18000-00 | 54000-00 | 500-00 | 180+32 |
| 3 | ನೆಲಮಂಗಲ ಘಟಕ | 30x30 | 01 | 900 | 20-00 | 18000-00 | 54000-00 | 500-00 | 180+32 |

ಮೇಲಿನ ಮಳಿಗೆಗಳಿಗೆ ಮತ್ತು ಹೋರ್ಡಿಂಗ್ಸ್ ಮುಖಾಂತರ ಇ-ಟೆಂಡರ್‌ನಲ್ಲಿ ಭಾಗವಹಿಸುವವರ ಪೈಕಿ ಯಶಸ್ವಿಯಾದವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಷರತ್ತು ಮತ್ತು ನಿಂಬಂಧನೆಗಳನ್ನು ಹಾಗೂ ಕೇಂದ್ರ/ರಾಜ್ಯ ಸರ್ಕಾರಗಳು ವಿಧಿಸುವ ತೆರಿಗೆಗಳು ಮತ್ತು ಷರತ್ತುಗಳಿಗೆ ಬದ್ಧರಾಗಿರಬೇಕು. ಸಲ್ಲಿಸಿರುವ ಅರ್ಜಿಗಳು ಕ್ರಮಬದ್ಧವಾಗಿಲ್ಲದ ಪಕ್ಷದಲ್ಲಿ ತಿರಸ್ಕರಿಸಲಾಗುವುದು. **ಯಾವುದೇ ಕಾರಣ ನೀಡದೆ ಇ-ಟೆಂಡರ್‌ನ್ನು ಮರಸ್ಕರಿಸುವ / ರದ್ದುಪಡಿಸುವ ಅಥವಾ ಮಾರ್ಪಾಡು ಮಾಡುವ ಹಕ್ಕನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: 7760990029 &** 7760990252 ಗಳನ್ನು ಸಂಪರ್ಕಿಸಲು ಕೋರಲಾಗಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ.
ಕ.ರಾ.ರ.ಸಾ.ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗ.
ಶಾಂತಿನಗರ, ಬೆಂಗಳೂರು